ಪ್ರಮಾಣ ವಚನ ಭೋದಿಸಿದ ದಿನಾಂಕಃ 02-09-2022.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ನಾನು ಮತ್ತು ಆರೋಪಿಗಳು ಈಡಿಗ ಜಾತಿಗೆ ಸೇರಿದವರು ಎಂದರೆ ಹೌದು . ನಮ್ಮದು ಬೆನ್ನಾರ್ ಮನೆತನ ಆಗಿದ್ದು ಆರೋಪಿಗಳದ್ದು ಮಳ್ಳಿ ಮನೆತನ ಎಂದರೆ ಹೌದು. ಮಳ್ಳಿ ಮನೆತನದವರು ಸಾರೇಕೊಪ್ಪ ಗ್ರಾಮದಲ್ಲಿ 23 ಮನೆಗಳು, ಬೆನ್ನಾರ್ ಮನೆತನದವರದ್ದು 25 ಮನೆಗಳು ಇವೆ ಎಂದರೆ ಹೌದು. ನಾನು 11 ವರ್ಷ ದುಬೈನಲ್ಲಿ ಇದ್ದೆ. ನಮ್ಮ ತಂದೆ ತಾಯಿಗೆ 3 ಜನ ಗಂಡು ಮಕ್ಕಳು ಇದ್ದು ನಾಗರಾಜ , ನಾನು ಮತ್ತು ಸತೀಶ ಎಂದರೆ ಹೌದು. ನನ್ನ ತಂದೆ ಹೆಸರು ಗಣಪತಿ. ನಮ್ಮ ಮೂರು ಮಂದಿಗೂ ಮದುವೆಯಾಗಿ ಮಕ್ಕಳಿದ್ದು ನಾವೆಲ್ಲರೂ ಒಂದೇಮನೆಯಲ್ಲಿ ವಾಸವಾಗಿದ್ದೇವೆ ಎಂದರೆ ಹೌದು. ನನ್ನ ತಾಯಿಯ ಹೆಸರು ತುಳಸಮ್ಮ. ನಮ್ಮ ಮನೆ ಸೊರಬ-ತವನಂದಿ ರಸ್ತೆಯಲ್ಲಿ ಇರುತ್ತದೆ ಎಂದರೆ ಹೌದು. ನಮ್ಮ ಮನೆಯ ಹಿಂದುಗಡೆ ಸುಮಾರು 1 ರಿಂದ ಒಂದುವರೆ ಎಕರೆ ತೋಟ ಮಾಡಿರುತ್ತೇವೆ. ಸದರಿ ತೋಟದ ಹಿಂಭಾಗದಲ್ಲಿ ಕಾನುಕೇರಿ ರಸ್ತೆ ಬರುತ್ತದೆ ಎಂದರೆ ಹೌದು. ನಮ್ಮ ಮನೆಯ ಹಿತ್ತಲು ಮತ್ತು 1 ನೇ ಆರೋಪಿಯ ಹಿತ್ತಲು ಅಕ್ಕಪಕ್ಕದಲ್ಲಿ ಇದೆ ಎಂದರೆ ಹೌದು. 1 ನೇ ಆರೋಪಿ ರಾಜಪ್ಪ ಮತ್ತು 2 ನೇ ಆರೋಪಿ ಪರಸಪ್ಪ ಅಣ್ಣ ತಮ್ಮಂದಿರು ಎಂದರೆ ಹೌದು.

ನಮ್ಮ ಮನೆಯ ಹಿತ್ತಲಲ್ಲಿ ಅಡಿಕೆ , ಬಾಳೆ ಬೆಳೆಸಿದ್ದೇನೆ. 1 ನೇ ಆರೋಪಿಯ ಮನೆಯ ಹಿತ್ತಲಲ್ಲಿ ದನಕರುಗಳ ಕೊಟ್ಟಿಗೆ ಇರುತ್ತದೆ ಎಂದರೆ ಮನೆಯ ಪಕ್ಕದಲ್ಲಿ ಇದೆ ಎಂದು ನುಡಿಯುತ್ತಾರೆ. 1 ಮತ್ತು 2 ನೇ ಆರೋಪಿತರ ಮನೆ 50 ಮೀಟರ್ ದೂರದ ಅಂತರದಲ್ಲಿ ಹಿತ್ತಲಲ್ಲಿ ಇರುತ್ತದೆ. ಅವರ ಮನೆಗಳಿಗೂ ಸಹ ಕಾನಕೇರಿ ರಸ್ತೆ ಬರುತ್ತದೆ ಎಂದರೆ ಹೌದು. 1 ಮತ್ತು 2 ನೇ ಆರೋಪಿಗಳು ಒಂದೇ ಮನೆಯಲ್ಲಿ 2 ಭಾಗಗಳನ್ನು ಮಾಡಿಕೊಂಡು ಬೇರೆ ಬೇರೆ ವಾಸ ಇದ್ದಾರೆ ಎಂದರೆ ಹೌದು. 1 ಮತ್ತು 2 ನೇ ಆರೋಪಿತರ ಮನೆಯ ಹಿಂಭಾಗದಲ್ಲಿ

ಸುಜಾತಮ್ಮನವರ ಮನೆ , ರೆಡ್ಡಿ ಪರಶುರಾಮನ ಮನೆ ಇರುತ್ತದೆ ಎಂದರೆ ಸರಿಯಲ್ಲ. ನಮ್ಮ ಮನೆಯ ಪಕ್ಕದಲ್ಲಿ ಸುಜಾತಮ್ಮನವರ ಮನೆ ಬರುತ್ತದೆ ಎಂದರೆ ಹೌದು. ಸುಜಾತಮ್ಮನವರ ಮನೆಯ ಪಕ್ಕದಲ್ಲಿ ರೆಡ್ಡಿ ಪರಶುರಾಮನ ಮನೆ ಬರುತ್ತದೆ ಎಂದರೆ ಹೌದು. ರೆಡ್ಡಿ ಪರಶುರಾಮನ ಮನೆಯ ಪಕ್ಕದಲ್ಲಿ ಹುಣಸೆ ನಾರಾಯಣಪ್ಪನ ಮನೆ ಬರುತ್ತದೆ ಎಂದರೆ ಹೌದು. ಇವರೆಲ್ಲರ ಮನೆಗಳ ಹಿಂಭಾಗದಲ್ಲಿ ಕಾನಕೇರಿ ರಸ್ತೆಗೆ ಮುಖ ಮಾಡಿ 1 ಮತ್ತು 2 ನೇ ಆರೋಪಿತರ ಮನೆ ಮತ್ತು ಹಿತ್ತಲು ಬರುತ್ತದೆ ಎಂದರೆ ಹೌದು.

ನಮ್ಮ ಮನೆಯಿಂದ ಪರಶುರಾಮಪ್ಪ ಮತ್ತು ಹುಣಸೆ ನಾರಾಯಣಪ್ಪ ರವರ ಮನೆ ಸುಮಾರು 100 ಮೀಟರ್ ಅಂತರ ಇರುತ್ತದೆ ಎಂದರೆ ಹೌದು. ಹುಣಸೆ ನಾರಾಯಣಪ್ಪನ ಮನೆಯಿಂದ ಗಡ್ಡದ ಶಿವಾಜಿ ರವರ ಮನೆಗೆ ಸುಮಾರು 700 ಮೀಟರ್ ದೂರ ಇರುತ್ತದೆ. ಶಿವಾಜಿ ಮನೆಯ ಹತ್ತಿರ ಒಂದು ಸರ್ಕಲ್ ಇದ್ದು ಅದನ್ನು ಶಿವಾಜಿ ಸರ್ಕಲ್ ಎನ್ನುತ್ತಾರೆ ಎಂದರೆ ಹೌದು. ಶಿವಾಜಿ ಸರ್ಕಲ್ ನಿಂದ ಕೆಳಗೆ ದಕ್ಷಿಣಕ್ಕೆ ಕೆಳಗಿನ ಕೇರಿಗೆ ಹೋಗುವ ರಸ್ತೆ ಇದೆ ಎಂದರೆ ಹೌದು. ಅಲ್ಲಿಂದ ಶನಿ ದೇವಸ್ಥಾನಕ್ಕೆ 50 ಮೀಟರ್ ದೂರ ಇರುತ್ತದೆ. ಶನಿ ದೇವರ ದೇವಸ್ಥಾನದ ಎದುರುಗಡೆ 6 ನೇ ಆರೋಪಿಯ ಮನೆ ಇರುತ್ತದೆ ಎಂದರೆ ಹೌದು. ಶಿವಾಜಿ ಸರ್ಕಲ್ ಪಕ್ಕದಲ್ಲಿ ಡಾಕಪ್ಪ , ಅಣ್ಣಪ್ಪ ಇವರ ಮನೆಗಳು ಬರುತ್ತವೆ ಎಂದರೆ ಸರಿಯಲ್ಲ. ಹುಣಸೇಕೊಪ್ಪದ ನಾರಾಯಣಪ್ಪನ ಮನೆಯಿಂದ ಶಿವಾಜಿ ಸರ್ಕಲ್ ಗೆ ಹೋಗುವ ಕಡೆ 4 , 5 , 7 ಮತ್ತು 8 ನೇ ಆರೋಪಿತರ ಮನೆ ಬರುತ್ತವೆ ಎಂದರೆ ಹೌದು.

ಪ್ರಾ ಸಾ- 5 ಪ್ರಮೋದಿನಿ ಚಾಸಾ-2 ರವರ ಹೆಂಡತಿ ಎಂದರೆ ಹೌದು. ಚಾಸಾ-7 ಚಂದ್ರಪ್ಪ ಪ್ರಾಸಾ 5 ರವರ ತಂದೆ ಎಂದರೆ ಹೌದು. ಚಾಸಾ-8 ಗಣಪತಿ ನನ್ನ ತಂದೆ ಎಂದರೆ ಹೌದು.

ನಮ್ಮ ಹಿತ್ತಲಲ್ಲಿ ಹಳೆ ಬೇಲಿ ತೆಗೆದು ಹೊಸ ಬೇಲಿ ಮಾಡಲು ಕ್ಲೀನ್ ಮಾಡಿ 15 ದಿನಗಳು ಆಗಿತ್ತು. ನನ್ನ ಬಳಿ ಜೆ ಸಿ ಬಿ ಇದೆ . ಸದರಿ ಜೆ ಸಿ ಬಿ ಯಿಂದ ಮಟ್ಟಿಯನ್ನು

ದಬ್ಬಿಕೊಂಡು ಬಂದು ಆರೋಪಿಗಳ ಹಿತ್ತಲಿಗೆ ದಬ್ಬಿದ್ದೆ ಎಂದರೆ ಸರಿಯಲ್ಲ. 15 ದಿನಗಳವರೆಗೆ ಸದರಿ ಮಟ್ಟಿಯನ್ನು ತೆಗೆಸಲಿಲ್ಲ ನಂತರ 16 ನೇ ದಿನ 1 ನೇ ಆರೋಪಿ ಸದರಿ ಮಟ್ಟಿಗೆ ಬೆಂಕಿ ಹಾಕಿದ್ದರು ಎಂದರೆ ಸದರಿ ಮಟ್ಟಿ ನಮ್ಮ ಜಾಗದಲ್ಲಿತ್ತು ಎಂದು ನುಡಿಯುತ್ತಾರೆ. ಸದರಿ ಬೆಂಕಿ ಹಾಕಿದ್ದರಿಂದ ನಮ್ಮ 2 ಬಾಳೆ ಗಿಡಗಳು ಸುಟ್ಟು ಹೋದವು ಎಂದರೆ ಸಾಕ್ಷಿ 35 ರಿಂದ 40 ಬಾಳೆಗಿಡಗಳು ಸುಟ್ಟು ಹೋಗಿವೆ ಎಂದು ನುಡಿಯುತ್ತಾರೆ. ಸದರಿ ದಿನ ನಾನು ಮತ್ತು ಚಾಸಾ-2 ರವರು ಬೇರೆ ಕಡೆ ಜೆ ಸಿ ಬಿ ತೆಗೆದುಕೊಂಡು ಕೆಲಸಕ್ಕೆ ಹೋಗಿದ್ದೆವು ಎಂದರೆ ಹೌದು. ಆರೋಪಿತರು ನಮ್ಮ ಜಾಗದಲ್ಲಿ ಬೆಂಕಿ ಹಾಕಿದ ಬಗ್ಗೆ ನಮ್ಮ ಮನೆ ಪಕ್ಕದವರಾದ ಮಹಾದೇವರವರು ನಮಗೆ ಹೇಳಿರುತ್ತಾರೆ. ನಮ್ಮ ತೋಟದ ಬಲಭಾಗದಲ್ಲಿ ಸದರಿ ಮಹಾದೇವರವರ ಮನೆ ಇದೆ. ವಿಷಯ ಗೊತ್ತಾದ ನಂತರ 1 ನೇ ಆರೋಪಿಯನ್ನುನಾವು ಕೇಳಲು ಹೋಗಿರುತ್ತೇವೆ. 1 ನೇ ಆರೋಪಿಯು ಹುಣಸೇಕೊಪ್ಪದ ಮಂಜುನಾಥರವರ ಮನೆಯ ಹತ್ತಿರ ತವನಂದಿ - ಸೊರಬ ಮುಖ್ಯ ರಸ್ತೆಯಲ್ಲಿ ಸಿಕ್ಕಿರುತ್ತಾನೆ. ನಾವು 1 ನೇ ಆರೋಪಿಯನ್ನು ದಾರಿಯಲ್ಲಿ ಹಿಡಿದುಕೊಂಡು ಬೆಂಕಿ ಹಾಕಿದ್ದೀಯಾ ಎಂದು ರಸ್ತೆಯಲ್ಲಿ ಎಳೆದಾಡುತ್ತಿದ್ದೆವು ಎಂದರೆ ಸರಿಯಲ್ಲ. 1 ನೇ ಆರೋಪಿಗೆ ಬುದ್ದಿ ಕಲಿಸಲು ನಾವು ಕೇಳಲು ಹೋಗಿದ್ದೆವು ಎಂದರೆ ಸರಿಯಲ್ಲ.

4 ರಿಂದ 8 ನೇ ಆರೋಪಿಗಳ ಮನೆಯ ಎದುರುಗಡೆ ಹುಣಸೇಕೊಪ್ಪದ ಮಂಜಪ್ಪನ ಮನೆ ಬರುತ್ತದೆ ಎಂದರೆ ಹೌದು. ನಾವು ಗಲಾಟೆ ಮಾಡುತ್ತಿರುವಾಗ ನೆರೆ ಹೊರೆಯವರು 50-60 ಜನ ಸೇರಿದ್ದರು ಅವರು ಗಲಾಟೆ ಬಿಡಿಸಿದರು ಎಂದರೆ ಸರಿಯಲ್ಲ. ಪ್ರಾ.ಸಾ2 ರವರ ಮನೆ ಒಂದುವರೆ ಕಿ.ಮೀ ದೂರದಲ್ಲಿ ಇದೆ. ಪ್ರಾ.ಸಾ-2 ತನ್ನ ಹೆಂಡತಿ ಮನೆಗೆ ಹೋಗಲು ಅದೇ ದಾರಿಯಲ್ಲಿ ಬಂದಿರುತ್ತಾನೆ ಎಂದರೆ ಹೌದು. ಪ್ರಾ.ಸಾ-2 ಗಲಾಟೆ ನೋಡಿ ಗಲಾಟೆ ಬಿಡಿಸಿ ನನಗೆ ಮತ್ತು ಚಾಸಾ-2 ರವರನ್ನು ಬಿಡಿಸಿ ಕಾರಿನಲ್ಲಿ ಕರೆದುಕೊಂಡು ಬಂದ ಎಂದರೆ ಸರಿಯಲ್ಲ.

ನಂತರ 1 ನೇ ಆರೋಪಿಯ ಮನೆಗೆ ನಮ್ಮ ಜೆ ಸಿ ಬಿ ಯನ್ನು ತೆಗೆದುಕೊಂಡು ಹೋಗಿ ಅವರ ಕೊಟ್ಟಿಗೆ ಮನೆಯನ್ನು ಬೀಳಿಸಿ ನಾಶಪಡಿಸಿರುತ್ತೇವೆ ಎಂದರೆ ಸರಿಯಲ್ಲ. ತಡೆಯಲು ಬಂದ

ಆರೋಪಿತರನ್ನು ನಾನು, ನನ್ನ ಅಣ್ಣ , ನನ್ನ ತಂದೆ , ನನ್ನ ತಮ್ಮ ಹೊಡೆದಿರುತ್ತೇವೆ ಎಂದರೆ ಸರಿಯಲ್ಲ. ಜೆ ಸಿ ಬಿ ಯನ್ನು ಆ ದಿನ ನಾನು ಓಡಿಸುತ್ತಿದ್ದೆ ಎಂದರೆ ಸರಿಯಲ್ಲ. ಜೆ ಸಿ ಬಿ ಯಿಂದ ನಾನು ಕೊಟ್ಟಿಗೆಯನ್ನು ಬೀಳಿಸುತ್ತಿರುವಾಗ ಚಾಸಾ2 ರವರಿಗೆ ತಲೆಗೆ ತಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಜೆ ಸಿ ಬಿ ಯನ್ನು ನನಗೆ ಸರಿಯಾಗಿ ಓಡಿಸಲು ಬರುವುದಿಲ್ಲ ಆದ್ದರಿಂದ ಚಾಸಾ-2 ರವರ ತಲೆಗೆ ಪೆಟ್ಟು ಆಗಿರುತ್ತದೆ ಎಂದರೆ ಸರಿಯಲ್ಲ.

1 ನೇ ಆರೋಪಿಗೆ ನಾನು, ನನ್ನ ಅಣ್ಣ , ನನ್ನ ತಂದೆ , ನನ್ನ ತಮ್ಮ ಸೇರಿಕೊಂಡು ಕೈಗಳಿಂದ ಗುದ್ದಿ ಹೊಡೆದಿರುತ್ತೇವೆ ಎಂದರೆ ಸರಿಯಲ್ಲ. ಜೆ ಸಿ ಬಿ ಯನ್ನು ನಾನು ಹಿಂದೆ ತೆಗೆದುಕೊಳ್ಳುವಾಗ ಪ್ರಾ ಸಾ -2 ರವರಿಗೆ ತಲೆಗೆ ತಾಗಿಸಿರುತ್ತೇನೆ ಎಂದರೆ ಸರಿಯಲ್ಲ. ನಂತರ ಪ್ರಾ.ಸಾ-3 ರವರು 1 ನೇ ಆರೋಪಿ ರಾಜಪ್ಪನನ್ನು ತನ್ನ ಮೋಟರ್ ಸೈಕಲ್ ನಲ್ಲಿ ಕರೆದುಕೊಂಡು ಹೋಗಿ ಸೊರಬ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುತ್ತಾನೆ ಎಂದರೆ ಸರಿಯಲ್ಲ. ನಾವು ಸಿಕ್ಕಾಪಟ್ಟೆ ಹೊಡೆದಿದ್ದರಿಂದ 1 ನೇ ಆರೋಪಿಯನ್ನು ಸೊರಬ ಆಸ್ಪತ್ರೆಯಿಂದ ಸಾಗರ ಆಸ್ಪತ್ರೆಗೆ ಸೇರಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ನನ್ನ ಮೇಲೆ , ನನ್ನ ತಮ್ಮ , ನನ್ನ ಅಣ್ಣ ಮತ್ತು ನನ್ನ ತಂದೆಯ ಮೇಲೆ ಆರೋಪಿತರು ಮೊದಲು ಸೊರಬ ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿದ್ದರು ಎಂದರೆ ಹೌದು .

1 ನೇ ಆರೋಪಿಗೆ ನಾವು ಹೊಡೆದದ್ದನ್ನು ತಪ್ಪಿಸಿಕೊಳ್ಳಲು ಚಾಸಾ-2 ರವರಿಗೆ ಜೆ ಸಿ ಬಿ ಯಿಂದ ಪೆಟ್ಟಾದ್ದದ್ದನ್ನು ಬಳಸಿಕೊಂಡು ರಾತ್ರಿ 8 ಗಂಟೆ ನಂತರದಲ್ಲಿ ನನ್ನ ತಮ್ಮನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆವು ಎಂದರೆ ಸರಿಯಲ್ಲ. ಚಾಸಾ-2 ರವರನ್ನು ನಾನೇ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಪೆಟ್ಟಾಗದಿದ್ದರೂ ನಾನೇ ಹಣೆಗೆ ಪೆಟ್ಟು ಮಾಡಿಕೊಂಡು ನನ್ನ ಅಣ್ಣ ನು ನನ್ನನ್ನುಕರೆದುಕೊಂಡು ಹೋಗಿ ಮ್ಯಾಕ್ಸ್ ಆಸ್ಪತ್ರೆಯಲ್ಲಿ ಅಡ್ಮಿಟ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮ್ಯಾಕ್ಸ್ ಆಸ್ಪತ್ರೆ ಖಾಸಗಿ ಆಸ್ಪತ್ರೆ ಎಂದರೆ ಹೌದು. ಮೆಗ್ಗಾನ್ ಆಸ್ಪತ್ರೆಯಲ್ಲಿ ನನ್ನ ತಮ್ಮನಿಗೆ ಚಿಕಿತ್ಸೆ

ಕೊಡಿಸಿರುವುದಿಲ್ಲ. ಆರೋಪಿತರು ಎಲ್ಲರೂ ದಾಯಾದಿಗಳು. 1 ಮತ್ತು 2 ನೇ ಆರೋಪಿತರು ಮಾತನಾಡುವುದಿಲ್ಲ ಹಾಗಾಗಿ ಅವರು ಪ್ರತ್ಯೇಕ ಮನೆಗಳಲ್ಲಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ.

1 ಮತ್ತು 2 ನೇ ಆರೋಪಿತರ ಕೊಟ್ಟಿಗೆಯನ್ನು ನಾಶ ಮಾಡಿ ಅವರಿಗೆ ಸುಮಾರು 50 ಸಾವಿರ ರೂ. ಲುಕ್ಸಾನು ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಿನಾಂಕಃ10-06-2019 ರಂದು ಮ್ಯಾಕ್ಸ್ ಆಸ್ಪತ್ರೆಯಲ್ಲಿ ನಾನು ದೂರು ನೀಡಿರುತ್ತೇನೆ. ಪೋಲಿಸರು ಮಹಜರ್ ಗೆ ಬಂದರೆ ನಾವು ಆರೋಪಿತರ ಕೊಟ್ಟಿಗೆ ಮನೆಯನ್ನುನಾಶ ಮಾಡಿರುವುದು ಗೊತ್ತಾಗುತ್ತದೆ ಎಂದು ಪೋಲೀಸರಿಗೆ ಮಹಜರ್ ಮಾಡಲು ನಾವು ಬಿಡಲಿಲ್ಲ ಎಂದರೆ ಸರಿಯಲ್ಲ. ದೂರನ್ನು ನಾನು ನೀಡಿರುತ್ತೇನೆ. ಸದರಿ ದೂರಿನಲ್ಲಿ ಕೊಲೆ ಮಾಡುವ ಉದ್ದೇಶದಿಂದ ಆರೋಪಿತರು ನಮಗೆ ಹೊಡೆದಿರುತ್ತಾರೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ.

ನಂತರ 10 ತಿಂಗಳ ನಂತರ ದಿಃ04-04-2020 ರಂದು ಆರೋಪಿತರು ಕೊಲೆ ಮಾಡುವ ಉದ್ದೇಶದಿಂದ ನಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದು ಮತ್ತು ಮಹಾದೇವಪ್ಪ ನಮ್ಮನ್ನು ಬಿಡಿಸಿರುತ್ತಾರೆ ಎಂದು ಕಥೆ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ಆ ನಂತರ ಪೋಲೀಸರ ಮೇಲೆ ಪ್ರಭಾವ ಬೀರಿ ಆರೋಪಿತರ ಕೇಸನ್ನು ಮುಚ್ಚಿ ಹಾಕಿಸಿ ನನ್ನ ಕೇಸನ್ನು ಮುಂದುವರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದುಬೈನಿಂದ ಸಾಕಷ್ಟು ಹಣ ತಂದು ಪೋಲಿಸರ ಮೇಲೆ ಪ್ರಭಾವ ಬೀರಿ ಆರೋಪಿಗಳ ಕೇಸನ್ನು ಮುಚ್ಚಿ ಹಾಕಿಸಿರುತ್ತೇನೆ ಎಂದರೆ ಸರಿಯಲ್ಲ.

2 ರಿಂದ 9 ನೇ ಆರೋಪಿತರು 1ನೇ ಆರೋಪಿಯ ಮನೆತನದವರು ಎಂಬ ಕಾರಣಕ್ಕಾಗಿ ಅವರು ಯಾವುದೇ ಗಲಾಟೆ ಮಾಡದಿದ್ದರೂ ಅವರನ್ನು ಸುಳ್ಳಾಗಿ ಕೇಸಿನಲ್ಲಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತೋಟದಿಂದ 1ನೇ ಆರೋಪಿಯ ಮನೆಗೆ ಹೋಗಲು 25 ಅಡಿ ದೂರ ಇರುತ್ತದೆ. ನಮ್ಮಮನೆಯ ಮುಂಭಾಗದ ರಸ್ತೆ ತವನಂದಿ - ಸೊರಬ ಮುಖ್ಯ ರಸ್ತೆಯಲ್ಲಿ ಹೋಗಿ ಸುಮಾರು ಒಂದುವರೆ ಕಿ ಮೀ ದೂರ ಹೋದರೆ ಕಾನಕೇರಿ ರಸ್ತೆ ಬಂದು ಅಲ್ಲಿಗೆ ಸೇರುತ್ತದೆ

ಎಂದರೆ ಹೌದು. ಆ ದಿನ 1 ನೇ ಆರೋಪಿಯನ್ನು ಕೇಳಲು ಮುಖ್ಯ ರಸ್ತೆಯಿಂದ ಹೋಗಿರುತ್ತೇವೆ ಎಂದರೆ ಹೌದು.

ಮಳ್ಳಿ ಮನೆತನ ಮತ್ತು ಬೆನ್ನೂರ್ ಮನೆತನದವರಿಗೂ ಯಾವುದೇ ವ್ಯಾಜ್ಯ ಇರಲಿಲ್ಲ ಬಹಳ ಪ್ರೀತಿಯಿಂದ ಇದ್ದರು ಎಂದರೆ 11 ವರ್ಷ ನಾನು ಹೊರಗಡೆ ಇದ್ದದ್ದರಿಂದ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಬೇಲಿಗೆ ಬೆಂಕಿ ಹಾಕುವ ಮೊದಲು 1 ಮತ್ತು 2 ನೇ ಆರೋಪಿತರಿಗೂ ಮತ್ತು ನಮಗೂ ಬೇಲಿ ವಿಷಯ ಬಿಟ್ಟರೆ ಬೇರೆ ಯಾವುದೇ ವ್ಯಾಜ್ಯ ಇಲ್ಲ. ನಾನು ಆ ದಿನ ಕೆಲಸ ಮುಗಿಸಿ ಸಂಜೆ 4-30 ಗಂಟೆಗೆ ಮನೆಗೆ ಬಂದಿರುತ್ತೇನೆ. ನಾನು ಮನೆಗೆ ಬಂದ ನಂತರ ಊಟ ಮಾಡಿಕೊಂಡು ನಂತರ ತೋಟ ನೋಡಲು ಹೋಗಿರುತ್ತೇನೆ . ಆ ಸಮಯದಲ್ಲಿ ತೋಟಕ್ಕೆ ಬೆಂಕಿ ಹಾಕಿದ ವಿಷಯ ನಮ್ಮ ಮನೆಯವರಿಗೆ ಗೊತ್ತಿರಲಿಲ್ಲ.

( ಆರೋಪಿತರ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟಿಸವಾಲಿಗೆ ಸಮಯಾವಕಾಶ ನೀಡಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).